

# ಭೂ ಬರಡು!

## ಕರ್ನಾಟಕದ ನಾಗಾಲೋಟ

**ಬೇರೆ ಬೇರೆ ಕಾರಣಗಳಿಂದಾಗಿ ಮಣ್ಣಿನ ಫಲವತ್ತತೆ ಶಕ್ತಿ ಕಡಿಮೆಯಾಗುತ್ತಿದೆ ಎನ್ನುವ ಆತಂಕ ಹಳೆಯದು. ಹೀಗೆ ಭೂಮಿ ಬರಡಾಗುತ್ತಿರುವ ಪ್ರಕ್ರಿಯೆಯಲ್ಲಿ ಕರ್ನಾಟಕ ದೇಶದಲ್ಲಿಯೇ ಮುಂಚೂಣಿಯಲ್ಲಿದೆ ಎನ್ನುವುದನ್ನು ಬಲ್ಲಿರಾ?**

**■ ಆರ್. ಮಂಜುನಾಥ್**

ಅತಿಯಾದ ರಾಸಾಯನಿಕ ಬಳಕೆ, ಅತಿಹೆಚ್ಚು ಕೀಟನಾಶಕ ಬಳಕೆಯಿಂದ ರಾಜ್ಯದಲ್ಲಿರುವ ಲಕ್ಷಾಂತರ ಹೆಕ್ಟೇರ್ ಭೂಮಿಯ ಫಲವಂತಿಕೆ ನಾಶವಾಗುತ್ತಿದೆ. ಈ ಫಲವಂತಿಕೆ ನಾಶದಲ್ಲಿ ದೇಶದ ಪ್ರಮಾಣಕ್ಕೆ ಹೋಲಿಸಿದರೆ ಕರ್ನಾಟಕದ ಪ್ರಮಾಣವೇ ಅಧಿಕವಾಗಿದೆ. ಇದು ಹೀಗೆಯೇ ಮುಂದುವರಿದರೆ ಭವಿಷ್ಯದಲ್ಲಿ ಮಾನವನಿಗೆ ಆಹಾರದ ಭದ್ರತೆಯೂ ಸಿಗದಂತಾಗುತ್ತದೆ.

ಭಾರತ ಸೇರಿದಂತೆ ವಿಶ್ವದ 163 ದೇಶಗಳಲ್ಲಿ ಭೂ ಫಲವಂತಿಕೆ (Land Degradation) ನಾಶವಾಗುತ್ತಿದೆ. ವಿಶ್ವದಲ್ಲಿ ಈ ಪ್ರಮಾಣ ಶೇ. 20ರಷ್ಟಿದೆ. ಭಾರತದಲ್ಲಿ ಶೇ. 29.32ರಷ್ಟಿದೆ. ಕರ್ನಾಟಕದಲ್ಲಿ ಭೂ ಫಲವಂತಿಕೆ ನಾಶ ಪ್ರಮಾಣ ಶೇ. 36.24ರಷ್ಟಿದೆ. ಅಂದರೆ ದೇಶದ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಿದೆ. ಭಾರತದ ರಾಜ್ಯಗಳಲ್ಲಿ ಜಾರ್ಖಂಡ್ ಶೇ. 68.98ರಷ್ಟು ಪ್ರಮಾಣದಲ್ಲಿ ಭೂ ಫಲವಂತಿಕೆ ನಾಶದಿಂದ ಪರಿತಪಿಸುತ್ತಿದ್ದು, ಈ ಪಟ್ಟಿಯಲ್ಲಿ ಕರ್ನಾಟಕ ದೇಶದಲ್ಲಿ 10ನೇ ಸ್ಥಾನದಲ್ಲಿದೆ. ಆತಂಕದ ಸಂಗತಿ ಎಂದರೆ, ಪ್ರಥಮ ಸ್ಥಾನದಲ್ಲಿರುವ ಜಾರ್ಖಂಡ್‌ಗಿಂತ ಅಧಿಕ ಭೂ ವ್ಯಾಪ್ತಿ ಕರ್ನಾಟಕದಲ್ಲಿ ಫಲವಂತಿಕೆ ನಾಶಕ್ಕೆ ಒಳಗಾಗಿದೆ.

ಕೇಂದ್ರ ಸರ್ಕಾರದ 'ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್' (ಇಸ್ರೊ) ಬಿಡುಗಡೆ ಮಾಡಿರುವ ಭೂ ಬರಡಾಗುವಿಕೆ ಮತ್ತು ಭೂ ಫಲವಂತಿಕೆ ನಾಶದ ಅಟ್ಲಾಸ್ ಆಫ್ ಇಂಡಿಯಾದ ಪ್ರಕಾರ, ಕರ್ನಾಟಕದಲ್ಲಿ 69.51 ಲಕ್ಷ ಹೆಕ್ಟೇರ್ ಭೂಮಿಯ ಫಲವಂತಿಕೆ ನಾಶವಾಗಿದೆ. ಇದು 2013ರವರೆಗಿನ ವರದಿ. ನಂತರದ ಆರು ವರ್ಷಗಳಲ್ಲಿ ಈ ಪ್ರಮಾಣ ಇನ್ನಷ್ಟು ಹೆಚ್ಚಾಗಿದೆ ಎಂಬುದು ತಜ್ಞರ ಖಾತರಿ ಮಾತು. ಮಳೆಯಿಂದ ಉಂಟಾದ ಸವಕಳಿಯಿಂದ ಶೇ. 26.29,